


# ಸಾಯೋ ಆಟ!

ಸಾಯಲು ಹೊರಟು ಮತ್ತೆ ಮತ್ತೆ ಬದುಕಿಗೆ ಮರಳುವ ಕಥೆಯನ್ನು ನವಿರಾಗಿ ನಿರೂಪಿಸುವ ಕಿರುಚಿತ್ರವಿದು.

■ ಗೌರಿ

ಒಬ್ಬ ವ್ಯಕ್ತಿಗೆ ಜೀವನದಲ್ಲಿ ಜಿಗುಪ್ಸೆ ಬಂದು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ. ತನ್ನನ್ನು ತಾನು ಹೇಗೆ ಕೊಂದುಕೊಳ್ಳುವುದು ಎಂಬ ಪ್ರಶ್ನೆ ಅವನ ಎದುರಿಗೆ ಬೃಹದಾಕಾರವಾಗಿ ಬೆಳೆದು ನಿಂತಿತು. ಉರುಳು ಹಾಕಿಕೊಂಡು ಸಾಯಲು ನಿರ್ಧರಿಸಿದ. ಆದರೆ ತಲೆಯ ಮೇಲೆ ಹಗ್ಗ ನೇತಾಡುತ್ತಿದ್ದ ಹಾಗೆಯೇ, 'ಅದು ಬಿಗಿದರೆ ಕತ್ತು ನೋಯುತ್ತಲ್ಲವೇ?' ಅನಿಸಿತು. ನದಿಯಲ್ಲಿ ಮುಳುಗಿ ಜೀವ ತೆಗೆದುಕೊಳ್ಳಲು ನಿರ್ಧರಿಸಿದ. 'ಈ ಚಳಿಗಾಲದಲ್ಲಿ ನದಿ ಪಕ್ಕ ನಿಂತಾಗಲೇ ಇಷ್ಟು ಚಳಿಯಾಗುತ್ತದೆ, ಇನ್ನು ನೀರಿಗೆ ಧುಮುಕಿದರೆ ಎಷ್ಟು ನಡುಕ ಬರಬಹುದು?' ಅನಿಸಿ ಹಿಂಜರಿದ. ರೈಲ್ವೆ ಹಳಿಯಲ್ಲಿ ಮಲಗಿದವ, ರೈಲಿನ ಕರ್ಕಶ ಶಬ್ದ ಕೇಳಿ ಹಿಂತೆಗೆದ. ಕರೆಂಟು ತಂತಿ ಹಿಡಿಯಲು ಹೊರಟವ, ಬಾಲ್ಯದಲ್ಲಿ ಸಣ್ಣಗೆ ಶಾಕ್ ಹೊಡೆದಿದ್ದು ನೆನಪಾಗಿ ತಿರುಗಿ ಬಂದ. ಇಂಥದ್ದೇ ಹತ್ತು ಹಲವು ಪ್ರಯತ್ನಗಳನ್ನು ಮಾಡುತ್ತಿರುವ ಹಾಗೆಯೇ ಅವನಿಗೆ, 'ಇಷ್ಟೆಲ್ಲ ಕಷ್ಟಪಟ್ಟು ಸಾಯುವುದಕ್ಕಿಂತ, ಬದುಕುವುದೇ ಸುಲಭವಲ್ಲವೇ?' ಅನಿಸಿಬಿಟ್ಟಿತು!

ಬದುಕು ಎಷ್ಟು ವಿಶಾಲವೂ, ಅಗಾಧವೂ ಆಗಿದೆ ಎಂಬುದನ್ನು ಅರಿಯದೇ ಕ್ಷುಲ್ಲಕ ಕಾರಣಗಳಿಗೆ ಆತ್ಮಹತ್ಯೆಗೆ ಮುಂದಾಗುವವರನ್ನು ತಮಾಷೆಯಾಗಿಯೇ ಚಿತ್ರಿಸುವ ಈ ಕಥೆಯಲ್ಲಿ, ಬದುಕು ಸಾಯುವುದಕ್ಕಿಂತ ದೊಡ್ಡದು ಎಂಬ ಸದಾಶಯವೂ ಇದೆ.

ಅಜಯ್ ಕುಮಾರ್ ಎಸ್. ನಿರ್ದೇಶಿಸಿದ 'ಏಪ್ರಿಲ್ 10' ಕಿರುಚಿತ್ರವೂ ಮೇಲಿನ ಕಥೆಯಲ್ಲಿನ ತಮಾಷೆ ಮತ್ತು ಸದಾಶಯಗಳೆರಡನ್ನೂ ಒಳಗೊಂಡಿದೆ. ತಮಾಷೆಯೇ ಅದರ ಹೊರಮೈ.

'ಏಪ್ರಿಲ್ 10' ನಮಗೆಲ್ಲರಿಗೂ 'ರಿಸಲ್ಟ್' ಬರುವ ದಿನವಾಗಿಯೇ ನೆನಪಿದೆ. ಅದರ ಹಿಂದಿನ ದಿನದ ತಳಮಳ, ಆ ದಿನ ಬೆಳಗಿನ ಅವಸರ, ಕಾತರ ಎಲ್ಲವೂ ಆ ದಿನಾಂಕ ನಮ್ಮ ಮನಸಲ್ಲಿ ಮರುಕಳಿಸುವಂತೆ ಮಾಡಿದೆ. ಈ ಕಿರುಚಿತ್ರದ ಕಥೆಯೂ ಏಪ್ರಿಲ್ 10ರಂದೇ ನಡೆಯುತ್ತದೆ. ಹಾಸ್ಟೆಲ್‌ನಲ್ಲಿರುವ ಸೋಂಬೇರಿ ವಿದ್ಯಾರ್ಥಿಯೊಬ್ಬನಿಗೆ ತಾನು ಎಲ್ಲ ವಿಷಯದಲ್ಲಿಯೂ ಫೇಲ್ ಆಗಿರುವುದು ತಿಳಿಯುತ್ತದೆ. ಫೇಲ್ ಆಗಿದ್ದೀನಿ ಎಂದಮೇಲೆ ಅನಿವಾರ್ಯವಾಗಿ ದುಃಖಪಡಲೇಬೇಕಲ್ಲ... ದುಃಖಪಡುತ್ತಾನೆ. ಅಪ್ಪ ಹಿಗ್ಗಾಮುಗ್ಗಾ ಬೈಯುವುದು ನೆನಪಾಗುತ್ತದೆ. ತಾನು ಯಾರಿಗೂ ಬೇಡದವನು ಅನಿಸುತ್ತದೆ. ತಾನು ಸತ್ತರೆ ಈ ಜಗತ್ತಿನಲ್ಲಿ ಯಾರಿಗೂ ಬೇಜಾರಾಗುವುದಿಲ್ಲ ಎಂದುಕೊಂಡು ಸಾಯಲು ನಿರ್ಧರಿಸುತ್ತಾನೆ. ರೂಮಿನ ಫ್ಯಾನಿಗೆ ಹಗ್ಗವನ್ನೂ ಬಿಗಿಯುತ್ತಾನೆ. ಉರುಳನ್ನು ಕತ್ತಿಗೆ ಇಳಿಸಿಕೊಂಡು ಇನ್ನೇನು ಮೆಟ್ಟಿದ್ದ ಕುರ್ಚಿ ಮುಂದಕ್ಕೊದೆಯಬೇಕು, ಅಷ್ಟರಲ್ಲಿ ಹೊರಗಡೆ ಯಾರೋ ಹಾಸ್ಟೆಲ್‌ನಲ್ಲಿ ಬೆಳಗಿನ ತಿಂಡಿಗೆ ದೋಸೆ ಮಾಡಿದ್ದಾರೆ, ರುಚಿಯಾಗಿದೆ ಎಂದು ಮಾತಾಡಿಕೊಳ್ಳುವುದು ಕೇಳಿಸುತ್ತದೆ. ಇವನ ಮನಸ್ಸು ಡೋಲಾಯಮಾನವಾಗುತ್ತದೆ. 'ಮೇಲುಗಡೆ ದೋಸೆ ಮಾಡುತ್ತಾರೋ ಇಲ್ಲವೋ?' ಎಂದುಕೊಂಡು ದೋಸೆ ತಿಂದುಕೊಂಡು ಬಂದು ಸಾಯೋಣ ಎಂದು ತೀರ್ಮಾನಿಸುತ್ತಾನೆ. ದೋಸೆ ತಿಂದುಬಂದು ಕೂತವನಿಗೆ ಸಿನಿಮಾವನ್ನು ಹೊಟ್ಟೆಯೊಳಗಿಟ್ಟುಕೊಂಡಿರುವ ಪೆನ್‌ಡ್ರೈವ್ ಕಾಣಿಸುತ್ತದೆ. ಸಿನಿಮಾ ನೋಡಿ ಸಾಯೋಣ ಅಂದುಕೊಳ್ಳುತ್ತಾನೆ. ಹೀಗೆ ಪ್ರತಿಸಲ ಕುಣಿಕೆ ಬಿಗಿಯಲು ಹೊರಟಾಗಲೂ ಬದುಕಿನ ಯಾವುದೋ ಒಂದು ಸಂಗತಿ ಅವನಿಗೆ ಆಮಿಷವೊಡ್ಡಿ ತಡೆಯುತ್ತದೆ. ಕೊನೆಗೆ ಇದಕ್ಕಿಂತ ಬದುಕುವುದೇ ಸುಲಭ ಎಂದುಕೊಂಡವನ ಹಾಗೆ, ಎಲ್ಲರ ಜೊತೆಗೆ ಸೇರಿಕೊಂಡು ಸಿನಿಮಾ ನೋಡುತ್ತ ಕೂಡುತ್ತಾನೆ.

ನಿರ್ದೇಶಕರು ತಮ್ಮ ಕಿರುಚಿತ್ರಕ್ಕೆ ಆಯ್ದುಕೊಂಡ ಚಿಕ್ಕ, ಹಗುರ ವಸ್ತುವನ್ನು ಅಷ್ಟೇ ಹಗುರವಾಗಿ ನಿರ್ವಹಿಸಿದ್ದಾರೆ. ಮುಖ್ಯಪಾತ್ರದಲ್ಲಿ ನಟಿಸಿರುವ ನರೇಶ್ ಭಟ್ ಅವರು ತೆರೆಯ ಮೇಲೆ ಪರದಾಡುತ್ತಲೇ ನಮ್ಮ ತುಟಿಗಳಲ್ಲಿ ತೆಳುವಾದ ನಗೆ ಅರಳಿಸುತ್ತಾರೆ. ತಮ್ಮ ಶಕ್ತಿಗೆ ಮೀರಿದ ಭಾರವನ್ನು ಹೊರದೆ, ಸೀಮಿತ ಚೌಕಟ್ಟಿನೊಳಗೆ ಕ್ಷಣಕಾಲ ಹಗುರ ನಗೆಯರಳಿಸುವ ಕಿರುಚಿತ್ರವಿದು.



ಹೆಸರು: ಏಪ್ರಿಲ್ 10
ನಿರ್ಮಾಣ: ಸತ್ಯ ಪಿಕ್ಚರ್ಸ್, ಮಯೂರ ಮೋಷನ್ ಪಿಕ್ಚರ್ಸ್
ನಿರ್ದೇಶನ: ಅಜಯ್ ಕುಮಾರ್ ಎಸ್.
ಛಾಯಾಗ್ರಹಣ: ಅಂಜನ್ ಆರ್. ಮಾಲೂರ್
ಸಂಗೀತ: ಭರತ್ ನಾಯ್ಕ, ವಾಸುಕಿ ವೈಭವ್
ತಾರಾಗಣ: ನರೇಶ್ ಭಟ್, ಸರ್ವೇಶ್ ಕುಮಾರ್

ಕಿರುಚಿತ್ರ ವೀಕ್ಷಣೆಗೆ https://bit.ly/36m4DQN ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.